## ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು ಕರೂರು ಇವರ ನ್ಯಾಯಾಲಯ, ಕರೂರು.

---

ಸಂಕಂ:ವಿವಾದ: 175 :2014-15 ದಿ: 22-04-2016

ಉಪಸ್ಥಿತರು: ಜೆ. ಭೈರಣ್ಣ
ಉಪ ತಹಶೀಲ್ದಾರರು, ಕರೂರು.

**ವಾದಿಗಳು:**
ಉಮಾಪತಿ ತಂದೆ: ಲೇಟ್ ಕರಿಲಿಂಗಪ್ಪ
ಹಿರೇಹಾಳು ಗ್ರಾಮ ಸಿರುಗುಪ್ಪ ತಾಲೂಕು

**ಪ್ರತಿವಾದಿಗಳು:**
ಹಂಪಮ್ಮ ಗಂಡ: ಭೀಮಪ್ಪ
ಸಿಂದಿಗೇರಿ ಗ್ರಾಮ,ಬಳ್ಳಾರಿ ತಾಲೂಕು

## ವಿವಾದಿತ ಜಮೀನಿನ ವಿವರ

| ಗ್ರಾಮದ ಹೆಸರು | ಸರ್ವೆನಂಬರ್ | ವಿಸ್ತೀರ್ಣ (ಎಕರೆ) | ಹ.ಬ.ಸಂಖ್ಯೆ | ವಹಿವಾಟು ಸಂಖ್ಯೆ |
|---|---|---|---|---|
| ಹಿರೇಹಾಳು | 175/1 | 0-98 | H 14/2014-15 | 41/2014-15 |

**ಪೀಠಿಕೆ:-**

ಸಿರುಗುಪ್ಪ ತಾಲೂಕಿನ **ಹಿರೇಹಾಳು ಗ್ರಾಮದ** ಸ.ನಂ.175/1 ವಿಸ್ತೀರ್ಣ 0-98 ಎಕರೆ ಜಮೀನಿಗೆ ಸಂಭಂದಿಸಿದಂತೆ **ಪೋತಿ ವಾರಸತ್ವ ಪ್ರಕಾರ ಉಮಾಪತಿ ತಂದೆ: ಲೇಟ್** ಕರಿಲಿಂಗಪ್ಪ ಹಿರೇಹಾಳು ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಡಲು ನಮೂನೆ-21 ನ್ನು ಪ್ರಚುರಪಡಿಸಲಾಗಿ ನಿಗದಿತ ಅವಧಿಯೊಳಗೆ **ಶ್ರೀಮತಿ: ಹಂಪಮ್ಮ ಗಂಡ: ಭೀಮಪ್ಪ** ಸಿಂದಿಗೇರಿ ಗ್ರಾಮ ಇವರು ದಿ: **24-11-2014** ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯಕಾಯ್ದೆ 1964ರ ಕಲಂ129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತೀರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು **ದಿ:24-7-2015, 15-10-2015, 13-11-2015, 05-02-2016, 8-3-2016, 18-3-2016, 2-4-16 ಮತ್ತು 15-4-2016** ರಂದು ಪ್ರಕರಣಕ್ಕೆ ಸಂಭಂದಿಸಿದಂತೆ ವಿಚಾರಣೆ ನಡೆಸಲಾಯಿತು. ವಿಚಾರಣೆ ಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕ್ಕೆ ಸಂಭಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕ್ತವಾಗಿದೆ.

ವಾದಿಗಳು :-

ವಾದಿಗಳಾದ ಉಮಾಪತಿ ತಂದೆ: ಲೇಟ್ ಕರಿಲಿಂಗಪ್ಪ ಹಿರೇಹಾಳು ಗ್ರಾಮ ಇವರು ಹಿರೇಹಾಳು ಗ್ರಾಮದ ಸ.ನಂ. 175/1 ವಿಸ್ತೀರ್ಣ 0-98 ಸೆಂಟ್ಸ್ ಜಮೀನು ನಾನು ಪೋತಿ ವಾರಸತ್ವ ಪ್ರಕಾರ ಪಟ್ಟ ವರ್ಗಾವಣೆಗಾಗಿ ಅರ್ಜಿ ಸಲ್ಲಿಸಲಾಗಿ ನನ್ನ ತಮ್ಮನ ಹೆಂಡತಿಯಾದ ಶ್ರೀಮತಿ: ಹಂಪಮ್ಮ ಗಂಡ: ಭೀಮಪ್ಪ ಲೇಟ್ ಇವರು ತಕರಾರು ಅರ್ಜಿಸಲ್ಲಿಸಿದ್ದು ಈವರಿಗೂ ಯಾವುದೇ ವಿಚಾರಣೆಗೆ ಹಾಜರಾಗಿರುವುದಿಲ್ಲ ಮತ್ತು ತಕರಾರು ಮಾಡಿದ ಅರ್ಜಿಯನ್ನು ಹಿಂದಕ್ಕೆ ತೆಗೆದುಕೊಂಡಿರುವುದಿಲ್ಲ ಸದ್ರಿ ಜಮೀನು ನನ್ನ ಹೆಸರಿಗೆ ಪೋತಿ ವಾರಸತ್ವ ಪ್ರಕಾರ ಪಟ್ಟ ವರ್ಗಾವಣೆ ಮಾಡಲು ಪ್ರಮಾಣಪತ್ರ ಸಲ್ಲಿಸಿರುತ್ತಾರೆ.

ಪ್ರತಿವಾದಿಗಳು :-

ತಕರಾರು ದಾರರಾದ ಶ್ರೀಮತಿ: ಹಂಪಮ್ಮ ಗಂಡ: ಭೀಮಪ್ಪ ಲೇಟ್ ಸಿಂದಿಗೇರಿ ಗ್ರಾಮ ಇವರು ತಕರಾರು ಅರ್ಜಿ ದಿ: 24-11-2014 ರಂದು ಸಲ್ಲಿಸಲಾಗಿ ಸದ್ರಿ ವಿಚಾರಣೆ ಸಮಯದಲ್ಲಿ ನೋಟೀಸು ನೀಡಿದಾಗ್ಯೂ ಹಾಜರಾಗಿರುವುದಿಲ್ಲ. ಹಾಗೂ ಲಿಖಿತ ಹೇಳಿಕೆಗಳನ್ನು ಸಹ ನೀಡಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ, ವಿಚಾರಣೆ ಮಾಡಲಾಗಿ ಸದರಿ ಜಮೀನು ಪೋತಿ ವಾರಸತ್ವ ಪ್ರಕಾರ ವಾದಿಗಳ ಹೆಸರಿಗೆ ಹಕ್ಕುಬದಲಾವಣೆ ಮಂಜೂರು ಮಾಡಲು ಈ ಕೆಳಕಂಡಂತೆ

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಹಿರೇಹಾಳು ಗ್ರಾಮದ ಸರ್ವೆನಂ: 175/1 ವಿಸ್ತೀರ್ಣ 0-98ಎಕರೆ ಜಮೀನು ಪೋತಿ ವಾರಸತ್ವ ಪ್ರಕಾರ ಉಮಾಪತಿ ತಂದೆ: ಲೇಟ್ ಕರಿಲಿಂಗಪ್ಪ, ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ 22 -04-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

ಉಪ ತಹಸೀಲ್ದಾರರು.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಸಿರುಗುಪ್ಪ ತಾ.

ಇದರ ಪ್ರತಿಯನ್ನು:

1. ವಾದಿ ಹಾಗೂ ಪ್ರತಿವಾದಿಗಳು
2. ತಹಶೀಲ್ದಾರರ ಕಾರ್ಯಾಲಯ ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನಕ್ರಮಕ್ಕಾಗಿ.
3. ಕಛೇರಿ ಕಡತಕ್ಕೆ.